ಇಸ್ಲಾಮೀ ಸಂಸ್ಕೃತಿಯಲ್ಲಿ ಆಡಳಿತದ ನೀತಿ-ನಿಯಮಗಳು

1. ಆಡಳಿತಗಾರನ ಆಯ್ಕೆ ಮತ್ತು ಅವನ ಸುಧಾರಣೆಯ ಹಕ್ಕು ಸಮುದಾಯಕ್ಕಿದೆ:

ತಮ್ಮ ಆಡಳಿತಗಾರನನ್ನು ಆಯ್ಕೆ ಮಾಡುವ, ಅವನಿಗಾಗಿ ಬೈಅತ್ (ಅನುಸರಣೆಯ ಕರಾರು) ಮಾಡುವ, ಅವನ ಆಡಳಿತ ವೈಖರಿ ಮತ್ತು ಖರ್ಚು-ವೆಚ್ಚಗಳ ಮೇಲೆ ನೋಟವಿರಿಸುವ ಹಕ್ಕು ಸಮುದಾಯಕ್ಕಿದೆ. ಒಂದು ವೇಳೆ ಆಡಳಿತಗಾರನು ನೇರ ಮಾರ್ಗದಿಂದ ವ್ಯತಿಚಲಿಸಿದರೆ, ಅವನನ್ನು ಸುಧಾರಿಸುವ ಹಕ್ಕು ಕೂಡ ಸಮುದಾಯದ ಸಾಮಾನ್ಯ ಜನರಿಗಿದೆ. ಆಡಳಿತಗಾರನ ಬೈಅತ್‌ನಲ್ಲಿ ಭಾಗಿಯಾಗುವುದು ಪ್ರತಿಯೋರ್ವ ಪ್ರಜ್ಞಾವಂತ ಮತ್ತು ಪ್ರೌಢ ಮುಸ್ಲಿಮನ ಹಕ್ಕಾಗಿದೆ. ಅಲ್ಲದೆ ಆಡಳಿತಗಾರನನ್ನು ಆಯ್ಕೆ ಮಾಡಲಿಕ್ಕಾಗಿ ಸಮುದಾಯದ ಬಹುಸಂಖ್ಯಾತರು ವಿದ್ವಾಂಸರ ಒಂದು ಸಮಿತಿಯನ್ನು ರಚಿಸಬೇಕು. ಅದನ್ನು ಪಾರಿಭಾಷಿಕದಲ್ಲಿ 'ಮಜ್ಲಿಸೆ ಶೂರಾ' (ಸಮಾಲೋಚನಾ ಸಮಿತಿ) ಎಂದು ಹೇಳಲಾಗುತ್ತದೆ.

ಇನ್ನು ಇಸ್ಲಾಮೀ ರಾಷ್ಟ್ರದ ಆಡಳಿತಗಾರ ಆಯ್ಕೆಯಲ್ಲಿ ರಾಷ್ಟ್ರದ ಸಕಲ ಮುಸ್ಲಿಮರೂ ಒಟ್ಟು ಸೇರಲೇ ಬೇಕೆಂಬ ಅಗತ್ಯವೇನೂ ಇಲ್ಲ. ಸಾಮ್ರಾಜ್ಯದ ಆಡಳಿತಗಾರನನ್ನು ಆಯ್ದುಕೊಳ್ಳಲು ಸಕಲ ಮುಸ್ಲಿಮರೂ ಒಟ್ಟು ಸೇರಿದ್ದಿಲ್ಲ ಎಂಬುದಕ್ಕೆ ಇತಿಹಾಸವೂ ಸಾಕ್ಷಿಯಾಗಿದೆ. ಉದಾಹರಣೆಗೆ: ಖುಲಫಾಉರ್ರಾಶಿದೀನ್‌ರ (ಸತ್ಯಸಂಧ ಖಲೀಫರ) ಬೈಅತ್‌ನಲ್ಲಿ ಮದೀನದ ಜನರು ಮತ್ತು ಮಕ್ಕಾದ ಕೆಲವು ಮಂದಿ ಮುಸ್ಲಿಮರು ಮಾತ್ರವೇ ಭಾಗವಹಿಸಿದ್ದರು.

ಒಂದು ವೇಳೆ ಆಡಳಿತಗಾರನ ಅನರ್ಹತೆ, ನೈತಿಕ ಕೇಡು ಸಾಬೀತಾದರೆ, ಅವನನ್ನು ಪದಚ್ಯುತಗೊಳಿಸಲಾಗುವುದು. ಆದರೆ ಅದಕ್ಕೂ ಮುಂಚೆ ಸಮುದಾಯದ ನಿಷ್ಠರೂ ವಿದ್ವಾಂಸರೂ ಆಗಿರುವ ಮಂದಿಯು ಅವನಿಗೆ ವಿವಿಧ ರೀತಿಯಲ್ಲಿ ಉಪದೇಶಿಸಬೇಕು. ಒಂದು ವೇಳೆ ಅವನು ಉಪದೇಶ ಆಲಿಸಿ, ಸತ್ಯವನ್ನು ಸ್ವೀಕರಿಸಿದರೆ ಮತ್ತು ಅದರೆಡೆಗೆ ಮರಳಿದರೆ ಅವನನ್ನು ಪದಚ್ಯುತಗೊಳಿಸುವುದು ಅನುವದನೀಯ ಅಲ್ಲ. ಒಂದು ವೇಳೆ ವಿದ್ವಾಂಸರ ಮತ್ತು ಉಪದೇಶಕರ ಉಪದೇಶಕ್ಕೆ ಕಿವಿಗೊಡದಿದ್ದರೆ, ಮುಸ್ಲಿಮರ ಒಳಿತನ್ನು ಪರಿಗಣಿಸದಿದ್ದರೆ, ಅವರ ಮಾನ ಮತ್ತು ಹಕ್ಕುಗಳನ್ನು ರಕ್ಷಿಸದಿದ್ದರೆ, ಅವನನ್ನು ಪದಚ್ಯುತಗೊಳಿಸುವುದು ಅನಿವಾರ್ಯವಾಗಿದೆ. ಆದರೆ ಅದಕ್ಕೆ ಜನರು ಅವನನ್ನು ಪದಚ್ಯುತಗೊಳಿಸುವ ಸಾಮರ್ಥ್ಯವನ್ನು ಹೊಂದಿರಬೇಕೆಂಬ ಶರ್ತವೂ ಇದೆ. ಅಂದರೆ ಅವನ ಪದಚ್ಯುತಿಯಿಂದ ಎಲ್ಲೂ ಕ್ಷೋಭೆ ಅಥವಾ ದಂಗೆಯುಂಟಾಗುವ ಆಶಂಕೆ ಇರಬಾರದು. ಒಂದು ವೇಳೆ ಆಡಳಿತಗಾರನನ್ನು ಪದಚ್ಯುತಗೊಳಿಸುವುದರಿಂದ ಹೆಚ್ಚು ನಾಶ-ನಷ್ಟಗಳುಂಟಾಗುತ್ತವೆ ಎಂದಾದರೆ, ಅವನ ಅಕ್ರಮ-ದೌರ್ಜನ್ಯಕ್ಕೆ ಸಹನೆ ವಹಿಸುವುದೇ ಉತ್ತಮವಾಗಿದೆ.

2. ಶೂರಾ (ಸಮಾಲೋಚನೆ)

ಶೂರಾ ಎಂಬುದು ಇಸ್ಲಾಮೀ ಸಾಮ್ರಾಜ್ಯದ ಒಂದು ಮೂಲಭೂತ ಅಂಗವಾಗಿದೆ. ಅಲ್ಲಾಹ್ ಹೇಳುತ್ತಾನೆ,

﴿وَشَاوِرۡهُمۡ فِي ٱلۡأَمۡرِ ﴾ آل عمران: ١٥٩

"ಧರ್ಮದ ಕೆಲಸಗಳಲ್ಲಿ ಇವರೊಡನೆ ಸಮಾಲೋಚಿಸಿರಿ." (ಪವಿತ್ರ ಕುರ್‌ಆನ್: 3: 159)
ಇನ್ನೊಂದೆಡೆ ಹೇಳುತ್ತಾನೆ,

www.uzairfalahi.com

﴿ وَأَمۡرُهُمۡ شُورَىٰ بَيۡنَهُمۡ ﴾ الشورى: ٣٨

“ಅವರು ತಮ್ಮ ವ್ಯವಹಾರಗಳನ್ನು ಪರಸ್ಪರ ಸಮಾಲೋಚನೆಯಿಂದ ನಡೆಸುತ್ತಾರೆ.” (ಪವಿತ್ರ ಕುರ್‌ಆನ್: 42: 38)

ಅಲ್ಲಾಹನ ಸಂದೇಶವಾಹಕರು(ಸ) ತಮ್ಮ ಸಂಗಡಿಗರೊಡನೆ ಸಮಾಲೋಚನೆ ನಡೆಸುತ್ತಿದ್ದರು. ಅದೇ ರೀತಿ ಖುಲಫಾಉರ್ರಾಶಿದರೂ ತಮ್ಮೆಲ್ಲ ಆಡಳಿತಾತ್ಮಕ ವ್ಯವಹಾರಗಳಲ್ಲಿ ವಿದ್ವಾಂಸರು ಮತ್ತು ಅನುಭವಿಗಳ ಸಲಹೆಯನ್ನು ಪಡೆಯುತ್ತಿದ್ದರು. ಉದಾಹರಣೆಗೆ: ನೇತಾರನ ಆಯ್ಕೆ, ಸೇನೆಯ ರವಾನೆ, ಸಮರಾರ್ಜಿತ ಸೊತ್ತಿನ ವಿತರಣೆ ಇತ್ಯಾದಿ. ಅವರು ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ಸ್ಪಷ್ಟ ಆದೇಶವಿಲ್ಲದ ವಿಷಯಗಳಲ್ಲಿ ವಿದ್ವಾಂಸರನ್ನು ಸಂಪರ್ಕಿಸುತ್ತಿದ್ದರು. ಅಬೂಬಕರ್ ಸಿದ್ದೀಕ್‌ರು(ರ) ಒಂದು ಸಮಿತಿಯನ್ನು ರಚಿಸಿದ್ದರು. ಅದರಲ್ಲಿ ಕುರ್‌ಆನ್ ವಚನ ಅಥವಾ ಸಹೀಹ್ ಹದೀಸ್‌ನಲ್ಲಿ ಸ್ಪಷ್ಟ ಆದೇಶವಿಲ್ಲದಂತಹ ವಿಷಯಗಳನ್ನು ಸಲ್ಲಿಸಲಾಗುತ್ತಿತ್ತು. ಅದೇ ರೀತಿ ಉಮರ್(ರ)ರವರೂ ಹಿರಿಯ ಸಹಾಬಿಗಳನ್ನು ಮದೀನದಿಂದ ಹೊರ ಹೋಗಲು ಬಿಡುತ್ತಿರಲಿಲ್ಲ. ಅಗತ್ಯದ ವೇಳೆ ಅವರೊಡನೆ ಸಮಾಲೋಚಿಸುವುದೇ ಅವರ ಉದ್ದೇಶವಾಗಿತ್ತು.

ಆದರೆ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ಸ್ಪಷ್ಟವಾದ ಆಧಾರವಿರುವಂತಹ ವಿಷಯಗಳಲ್ಲಿ ಸಮಾಲೋಚನೆ ಇರುವುದಿಲ್ಲ. ಅಂತಹ ವ್ಯವಹಾರಗಳಲ್ಲಿ ಸಮಾಲೋಚನೆಗೆ ಯಾವುದೇ ಪ್ರವೇಶವಿಲ್ಲ. ಪ್ರವಾದಿವರ್ಯರು(ಸ) ಕುರ್‌ಆನಿನಲ್ಲಿ ಸ್ಪಷ್ಟ ಆಧಾರವಿಲ್ಲದ ಮತ್ತು ತಮ್ಮ ಬಳಿ ಯಾವುದೇ ವಹೀ (ದಿವ್ಯವಾಣಿ) ಅವತೀರ್ಣಗೊಂಡಿಲ್ಲದ ವಿಷಯದಲ್ಲಿ ಸಮಾಲೋಚನೆಯ ವ್ಯವಸ್ಥೆ ಮಾಡುತ್ತಿದ್ದರು. ಸಮಾಲೋಚನೆಯು ಎರಡು ವಿಷಯಗಳಲ್ಲಿ ಆಗುವುದು.

1) ಹೊಣೆಗಾರಿಕೆಯನ್ನು ನಿಭಾಯಿಸುವ ಸಾಮರ್ಥ್ಯವುಳ್ಳ ಮುಸ್ಲಿಮ್ ಆಡಳಿತಗಾರನ ಆಯ್ಕೆ ಮಾಡುವುದು, ಅಲ್ಲಾಹನ ಗ್ರಂಥ ಮತ್ತು ಅವನ ಸಂದೇಶವಾಹಕರ(ಸ) ವಾಣಿಯನ್ನು ಅನುಸರಿಸಲು ಅವನಲ್ಲಿ ಬೈಅತ್ ಮಾಡುವುದು, ಒಂದು ವೇಳೆ ಬೈಅತ್ ಸಂಪೂರ್ಣಗೊಂಡ ಮೇಲೆ ಬಲಪ್ರಯೋಗವಿಲ್ಲದೆ ಅವನ ಆಜ್ಞಾಪಾಲನೆ ಮತ್ತು ಅನುಸರಣೆ ಆಗಬೇಕಾದುದು ಅಗತ್ಯ.

2) ಆಡಳಿತಗಾರನು ನಿರಂಕುಶನಾಗಿರಬಾರದು. ಪ್ರತಿಯೋರ್ವ ಮುಸ್ಲಿಮನಿಗೂ ಸಂಪೂರ್ಣ ಸ್ವಾತಂತ್ರ್ಯ ಮತ್ತು ಶಕ್ತಿಯೊಂದಿಗೆ ಆಡಳಿತ ವ್ಯವಹಾರಗಳಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸುವ ಹಕ್ಕು ಇದೆ. ಅಂತೆಯೇ ಪ್ರಜೆಗಳ ಮಾತನ್ನು ಗಮನಕೊಟ್ಟು ಆಲಿಸುವುದು ಮತ್ತು ಅವರ ಮಾತು ಸರಿಯೆನಿಸಿದರೆ ಅದರಿಂದ ಪ್ರಯೋಜನ ಪಡೆಯುವುದು ಆಡಳಿತಗಾರನ ಮೇಲೆ ಕಡ್ಡಾಯವಾಗಿದೆ. ಜನರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯ ಇದೆಯಾದರೂ ಆಡಳಿತಗಾರನು ಎಲ್ಲ ಪ್ರಮುಖ ವಿಷಯಗಳಲ್ಲಿಯೂ ಜನತೆಯ ಸಲಹೆಯನ್ನು ಪಡೆಯಬೇಕೆಂದಿಲ್ಲ. ಏಕೆಂದರೆ ಅವರು ಸಕಲ ವ್ಯವಹಾರಗಳಲ್ಲೂ ಸರಿಯಾದ ಜ್ಞಾನವನ್ನು ಹೊಂದಿರಲೇ ಬೇಕೆಂದಿಲ್ಲ. ಬದಲಾಗಿ ಆಡಳಿತಗಾರನು ತಜ್ಞರ ಸಲಹೆಯನ್ನು ಪಡೆಯಬೇಕು. ಆಡಳಿತದ ಪ್ರಮುಖ ವಿಷಯಗಳಲ್ಲಿ ಸಲಹೆ ನೀಡಲು ಕೆಲವು ಶರ್ತಗಳಿರುತ್ತವೆ. ಅಂದರೆ ಜ್ಞಾನ, ಧರ್ಮನಿಷ್ಠೆ, ಪ್ರಾಮಾಣಿಕತೆ, ಅತ್ಯುತ್ತಮ ಯೋಜನೆ ಮತ್ತು ಆಲೋಚಿಸುವ ಸಾಮರ್ಥ್ಯ ಇತ್ಯಾದಿ.

www.uzairfalahi.com

ಅಂದರೆ ಯಾರ ಬಳಿ ಜನರು ತಮ್ಮ ಅಗತ್ಯಗಳು ಮತ್ತು ವ್ಯವಹಾರಗಳಿಗಾಗಿ ಸಮೀಪಿಸುತ್ತಾರೋ ಅಂತಹ ಅಧಿಕಾರಿಗಳು, ವಿದ್ವಾಂಸರು, ಸೇನೆಯ ದಂಡನಾಯಕರು ಮತ್ತು ಇತರ ವ್ಯವಹಾರಗಳಲ್ಲಿ ನೇತಾರರಾಗಿರುವವರೇ ತಜ್ಞರೆನಿಸಿಕೊಳ್ಳುತ್ತಾರೆ.

ಇಸ್ಲಾಮ್ ಸಮಾಲೋಚನೆಗೆ ಬಹಳ ಪ್ರಾಧಾನ್ಯತೆಯನ್ನು ನೀಡಿದೆ. ಏಕೆಂದರೆ ಸಮಾಜ ಮತ್ತು ವ್ಯಕ್ತಿಯ ಜೀವನದಲ್ಲಿ ಅದರಿಂದ ಬಹಳ ಉತ್ತಮ ಪರಿಣಾಮಗಳು ಉಂಟಾಗುತ್ತವೆ. ಅವುಗಳಲ್ಲಿ ಕೆಲವು ಈ ರೀತಿ ಇವೆ:

1) ಇದು ವ್ಯಕ್ತಿಯ ಘನತೆ ಮತ್ತು ಸಾಮೂಹಿಕ ಯುಕ್ತಿಯ ಆಧಾರದಲ್ಲಿ ಆತನ ವ್ಯಕ್ತಿತ್ವದ ಅಂಗೀಕಾರಕ್ಕಾಗಿ ರೂಪಿಸಿರುವ ಕಾನೂನಿಗೆ ಪೂರಕವಾಗಿದೆ.

2) ಇದು ಸಮಾಲೋಚನೆಯ ವಿಷಯದಲ್ಲಿ ಒಳಪಡುವಂತಹ ವ್ಯವಹಾರಗಳಲ್ಲಿ ಸರಿಯಾದ ಅಭಿಪ್ರಾಯಕ್ಕೆ ತಲುಪುವ ಸುರಕ್ಷಿತ ಹಾದಿಯಾಗಿದೆ. ಅಲ್ಲದೆ ಸಮಾಲೋಚನೆಯ ಮೂಲಕ ಆಡಳಿತಗಾರನು ಜನತೆಯ ಭಾವನೆಗಳು ಮತ್ತು ಅವರ ಹಕ್ಕುಗಳನ್ನು ಗೌರವಿಸುತ್ತಾನೆ. ಏಕೆಂದರೆ ಅವರೂ ಆಡಳಿತದಲ್ಲಿ ಭಾಗೀದಾರರಾಗಿರುತ್ತಾರೆ.

3) ಇದು ಜನಸಾಮಾನ್ಯರ ಹಕ್ಕುಗಳನ್ನು ಸಂರಕ್ಷಿಸುತ್ತದೆ, ಅಧಿಕಾರಿಗಳ ನಡತೆಯನ್ನು ಸುಧಾರಿಸುತ್ತದೆ ಮತ್ತು ಆಡಳಿತ ವ್ಯವಹಾಗಳಲ್ಲಿ ಅವರ ದೃಢತೆ ಹಾಗೂ ಅತ್ಯುತ್ತಮ ಯುಕ್ತಿಯನ್ನು ಬೆಳೆಸುತ್ತದೆ.

ಇದು ಇಸ್ಲಾಮೀ ಸಮಾಲೋಚನೆಯಾಗಿದೆ ಮತ್ತು ನಿಜಾರ್ಥದಲ್ಲಿ ಇದುವೇ ಯಾವುದೇ ಭಯವಿಲ್ಲದೆ ಪ್ರತಿಯೋರ್ವ ವ್ಯಕ್ತಿಯೂ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ನೀಡುವ ವ್ಯವಸ್ಥೆಯಾಗಿದೆ.

3. ನ್ಯಾಯ–ಸಮಾನತೆ

ಇಸ್ಲಾಮ್ ನ್ಯಾಯ–ಸಮಾನತೆಯ ಆದೇಶವನ್ನೀಯುತ್ತದೆ ಮತ್ತು ಅದನ್ನೇ ಇಸ್ಲಾಮೀ ಆಡಳಿತದ ಉದ್ದೇಶವೆಂದು ಸಾರಿದೆ. ನ್ಯಾಯ–ಸಮಾನತೆ ಎಂದರೆ ಪ್ರತಿಯೋರ್ವ ವ್ಯಕ್ತಿಗೂ ಯಾವುದೇ ಹೆಚ್ಚು–ಕಡಿಮೆಯಿಲ್ಲದೆ ಅವನ ಹಕ್ಕು ದೊರೆಯಬೇಕೆಂಬುದಾಗಿದೆ. ಇದು ಆಡಳಿತಗಾರನ ಹೊಣೆಗಾರಿಕೆಯಾಗಿದೆ ಮತ್ತು ಅವನು ಅದಕ್ಕೆ ಉತ್ತರದಾಯಿಯಾಗಿದ್ದಾನೆ. ಆಡಳಿತಗಾರನು ಎಲ್ಲಾದರೂ ಅಕ್ರಮವೆಸಗಿದರೆ ಅವನನ್ನು ವಿಚಾರಣೆಗೊಳಪಡಿಸುವ ಹಕ್ಕು ಸಮುದಾಯಕ್ಕಿದೆ. ನ್ಯಾಯ–ಸಮಾನತೆಯು ಮುಸ್ಲಿಮರು ಮತ್ತು ಮುಸ್ಲಿಮೇತರರೆನ್ನದೆ ಎಲ್ಲರ ಜೀವ, ಸೊತ್ತು, ಮಾನ ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಸರ್ವ ಹಕ್ಕುಗಳನ್ನೂ ಒಳಗೊಂಡಿದೆ.

ಪವಿತ್ರ ಕುರ್‌ಆನ್‌ನಲ್ಲಿ ಹಲವು ವಚನಗಳಲ್ಲಿ ನ್ಯಾಯ–ಸಮಾನತೆಯ ಸ್ಪಷ್ಟ ಆದೇಶಗಳನ್ನು ನೀಡಲಾಗಿದೆ; ಅಂತೆಯೇ ಅಕ್ರಮ ಮತ್ತು ಅದರ ಪರಿಣಾಮದ ಬಗ್ಗೆ ಎಚ್ಚರಿಸುತ್ತದೆ. ಅಲ್ಲಾಹ್ ಹೇಳುತ್ತಾನೆ,

www.uzairfalahi.com

﴿ إِنَّ ٱللَّهَ يَأۡمُرُ بِٱلۡعَدۡلِ وَٱلۡإِحۡسَٰنِ وَإِيتَآيِٕ ذِي ٱلۡقُرۡبَىٰ وَيَنۡهَىٰ عَنِ ٱلۡفَحۡشَآءِ وَٱلۡمُنكَرِ وَٱلۡبَغۡيِۚ
يَعِظُكُمۡ لَعَلَّكُمۡ تَذَكَّرُونَ ﴿٩٠﴾ ﴾ النحل: ٩٠

"ಅಲ್ಲಾಹ್ ನ್ಯಾಯ, ಪರೋಪಕಾರ ಹಾಗೂ ಆಪ್ತೇಷ್ಟರ ಬಗ್ಗೆ ಸೌಜನ್ಯದ ಆಜ್ಞೆ ನೀಡುತ್ತಾನೆ ಮತ್ತು ಅಶ್ಲೀಲ ಕಾರ್ಯ, ದುಷ್ಕೃತ್ಯ, ಅಕ್ರಮ, ಅತ್ಯಾಚಾರಗಳನ್ನು ನಿಷೇಧಿಸುತ್ತಾನೆ. ನೀವು ಜಾಗೃತರಾಗಲಿಕ್ಕಾಗಿ ಅವನು ನಿಮಗೆ ಉಪದೇಶ ನೀಡುತ್ತಾನೆ." (ಪವಿತ್ರ ಕುರ್‌ಆನ್: 16: 90)

ಅಲ್ಲಾಹನ ಸಂದೇಶವಾಹಕರು(ಸ) ಹೇಳುತ್ತಾರೆ,

«اتَّقُوا الظُّلْمَ فَإِنَّ الظُّلْمَ ظُلُمَاتٌ يَوْمَ الْقِيَامَةِ»

"ಅಕ್ರಮದಿಂದ ದೂರವಿರಿ. ಏಕೆಂದರೆ ಪುನರುತ್ಥಾನ ದಿನದಂದು ಅಕ್ರಮಿಯ ಪಾಲಿಗೆ ಅಂಧಕಾರವಿರುವುದು." (ಮುಸ್ಲಿಮ್)

ಇಲ್ಲಿ ಉದ್ದೇಶಿಸಿರುವ ನ್ಯಾಯ–ಸಮಾನತೆಯ ಅರ್ಥವು ಸರ್ವರಿಗೂ ಏಕ ಪ್ರಕಾರದ ಕಾನೂನು ಇರಬೇಕೆಂದಾಗಿದೆ. ಇಲ್ಲಿ ಬಡವ–ಬಲ್ಲಿದನೆಂಬ ಬೇಧವಿಲ್ಲದೆ, ಅಧಿಕಾರಿ–ಸಾಮಾನ್ಯ ಪ್ರಜೆ ಎಂಬ ವ್ಯತ್ಯಾಸವಿಲ್ಲದೆ ಎಲ್ಲರೂ ಈ ಕಾನೂನಿಗೆ ಸಮಾನ ಬಾಧ್ಯಸ್ಥರಾಗಿರುವರು. ಈ ಪ್ರಕಾರ ಈ ನ್ಯಾಯ ವ್ಯವಸ್ಥೆಯು ಆಡಳಿತದ ನಿರಂತರತೆ ಮತ್ತು ಸಂರಕ್ಷಣೆಗೆ ಪ್ರಬಲವಾದ ಬುನಾದಿಯನ್ನು ನೀಡುತ್ತದೆ. ಇಬ್ನು ತೈಮಿಯ(ರ) ಹೇಳುತ್ತಾರೆ, "ಅಲ್ಲಾಹನು ನ್ಯಾಯಪ್ರಿಯವಾದ ಆಡಳಿತವನ್ನು ಉಳಿಸುತ್ತಾನೆ. ಆಡಳಿತಗಾರನು ಸತ್ಯನಿಷೇಧಿಯಾಗಿದ್ದರೂ ಸರಿ. ಅಂತೆಯೇ ಅಕ್ರಮಿಯ ಆಡಳಿತವನ್ನು ಅಳಿಸಿ ಬಿಡುತ್ತಾನೆ. ಆಡಳಿತಗಾರನು ಮುಸ್ಲಿಮನಾಗಿದ್ದರೂ ಸರಿಯೆ."

ಈ ನ್ಯಾಯ ವ್ಯವಸ್ಥೆಯು ಸ್ಥಾಪನೆಯಾಗಬೇಕಾದರೆ, ಅದನ್ನು ರಕ್ಷಿಸುವ ಒಂದು ಶಕ್ತಿಯಿರಬೇಕಾದುದು ಮತ್ತು ನ್ಯಾಯದ ಆಡಳಿತವಿರಬೇಕಾದುದು ಅಗತ್ಯ. ಆದ್ದರಿಂದಲೇ ಖಲೀಫಾ ಉಮರ್‌ರವರು(ರ), ನ್ಯಾಯ ಸ್ಥಾಪಿಸುವ ಕಾಝಿಗಳಿಗೆ ಇತರೆಲ್ಲ ರೀತಿಯ ಹೊಣೆಗಾರಿಕೆ ಮತ್ತು ಸ್ಥಾನಮಾನದಿಂದ ಮುಕ್ತವಾಗಿರಿಸುತ್ತಿದ್ದರು. ಇದು ಇಸ್ಲಾಮೀ ಆಡಳಿತದ ನೀತಿಗಳ ಪೈಕಿ ಒಂದು ಪ್ರಮುಖವಾದ ನೀತಿಯಾಗಿದೆ. ಉಮರ್‌ರವರನ್ನು(ರ) ಖಲೀಫರನ್ನಾಗಿ ಆಯ್ಕೆ ಮಾಡಲಾದಾಗ ಮತ್ತು ಇಸ್ಲಾಮೀ ಸಾಮ್ರಾಜ್ಯವು ದೂರದೂರದ ವರೆಗೆ ವಿಸ್ತರಿಸಿದಾಗ ಅವರು ಪ್ರತಿಯೊಂದು ರಾಜ್ಯಗಳಿಗೆ ಕಾಝಿಗಳನ್ನು ನೇಮಿಸಿದರು, ನ್ಯಾಯಾಧಿಕರಣದ ವ್ಯವಸ್ಥೆ ಮಾಡಿದರು ಮತ್ತು ಅವರನ್ನು ಇತರ ವ್ಯವಸ್ಥೆಯಿಂದ ಪ್ರತ್ಯೇಕವಾಗಿರಿಸಿದರು.

ನಿಶ್ಚಯವಾಗಿಯೂ ಈ ನ್ಯಾಯ ವ್ಯವಸ್ಥೆಯು ಪ್ರತಿಯೋರ್ವ ನಾಗರಿಕನ ಸೊತ್ತು, ಮಾನ ಮತ್ತು ಇತರೆಲ್ಲ ಹಕ್ಕುಗಳ ಕುರಿತಾಗಿ ಶಾಂತಿ–ಸಮಾಧಾನದ ಭಾವನೆಯನ್ನು ಮೂಡಿಸುತ್ತದೆ. ಈ ವ್ಯವಸ್ಥೆಯ ಪರಿಣಾಮವಾಗಿ ಅಪರಾಧಗಳು ಕಡಿಮೆಯಾಗುತ್ತವೆ ಮತ್ತು ಪ್ರತಿಯೋರ್ವ ವ್ಯಕ್ತಿಯೂ ತನ್ನ ಕೆಲಸ ಕಾರ್ಯಗಳಲ್ಲಿ ವ್ಯಸ್ತನಾಗಿ ಬಿಡುತ್ತಾನೆ; ಆತ ಸಮಾಜ ನಿರ್ಮಾಣ ಮತ್ತು ಅದರ ಪ್ರಗತಿಯಲ್ಲಿ ಪಾಲ್ಗೊಳ್ಳುತ್ತಾನೆ; ನ್ಯಾಯದ ಕಾರಣವಾಗಿ ವ್ಯಕ್ತಿಯು ತನ್ನ ಕೆಲಸ ಮತ್ತು ಪರಿಶ್ರಮಕ್ಕೆ ತಕ್ಕಂತಹ ಫಲವನ್ನು ಪಡೆಯುತ್ತಾನೆ; ಒಳಿತಿನ ಕಾರ್ಯಗಳಲ್ಲಿ ಮುಂದುವರಿಯಲು ಪ್ರಯತ್ನಿಸುತ್ತಾನೆ. ಹೀಗೆ ನ್ಯಾಯದಿಂದ ಸಮಾನತೆಯು ಸ್ಥಾಪನೆಯಾಗುತ್ತದೆ ಮತ್ತು ಜನರು ತಮ್ಮ ಪ್ರಯತ್ನ ಹಾಗೂ ಪ್ರತಿಭೆ–ಸಾಮರ್ಥ್ಯಕ್ಕೆ ತಕ್ಕಂತೆ ಮುಂದುವರಿಯುತ್ತಾರೆ. ಇಸ್ಲಾಮ್, ಮುಸ್ಲಿಮರಿಗೆ ಜೀವನದಲ್ಲಿ ನ್ಯಾಯ–ಸಮಾನತೆಯನ್ನು ಸ್ಥಾಪಿಸುವ ಒಂದು ಅತ್ಯುತ್ತಮ ಮಾದರಿಯನ್ನು ನೀಡಿದೆ.

4. ಆಡಳಿತಗಾರನ ಅನುಸರಣೆ

ಆಡಳಿತಗಾರನನ್ನು ಅನುಸರಿಸುವುದು ಇಸ್ಲಾಮೀ ಸಾಮ್ರಾಜ್ಯದ ನೀತಿಗಳ ಪೈಕಿ ಪ್ರಮುಖವಾದ ನೀತಿಯಾಗಿದೆ. ಆಡಳಿತಗಾರನು ಅಲ್ಲಾಹನ ಮೇರೆಗಳನ್ನು ಪಾಲಿಸುತ್ತಿರುವ ತನಕ ಮತ್ತು ಪಾಪ ಕಾರ್ಯಗಳ ಆದೇಶವನ್ನು ನೀಡದಿರುವ ತನಕ ಅವನನ್ನು ಅನುಸರಿಸಬೇಕು. ಅಲ್ಲಾಹ್ ಹೇಳುತ್ತಾನೆ,

﴿ يَٰٓأَيُّهَا ٱلَّذِينَ ءَامَنُوٓا۟ أَطِيعُوا۟ ٱللَّهَ وَأَطِيعُوا۟ ٱلرَّسُولَ وَأُو۟لِى ٱلْأَمْرِ مِنكُمْ ۖ ﴿٥٩﴾ ﴾ النساء: ٥٩

“ಓ ಸತ್ಯವಿಶ್ವಾಸಿಗಳೇ, ಅಲ್ಲಾಹನ ಆಜ್ಞಾಪಾಲನೆ ಮಾಡಿರಿ, ಸಂದೇಶವಾಹಕರ ಮತ್ತು ನಿಮ್ಮೊಳಗಿನ ಉಲುಲ್ ಅಮ್ರ್‌ರ (ಆಜ್ಞಾಧಿಕಾರ ಹೊಂದಿದವರ) ಆಜ್ಞಾಪಾಲನೆ ಮಾಡಿರಿ.” (ಪವಿತ್ರ ಕುರ್‌ಆನ್: 4: 59)

ಆಡಳಿತಗಾರನ ಮಾತನ್ನಾಲಿಸುವುದು ಮತ್ತು ಅವನನ್ನು ಅನುಸರಿಸುವುದು ಮುಸ್ಲಿಮನ ಮೇಲೆ ವಾಜಿಬ್ (ಕಡ್ಡಾಯ) ಆಗಿದೆ. ಅದು ಅವನಿಗೆ ಇಷ್ಟವಿದ್ದರೂ ಇಲ್ಲದಿದ್ದರೂ ಸರಿಯೆ. ಆದರೆ ಆಡಳಿತಗಾರನು ಪಾಪಕಾರ್ಯಗಳ ಆದೇಶ ನೀಡಿದರೆ, ಅದನ್ನು ಪಾಲಿಸಬೇಕಾಗಿಲ್ಲ. ಅಲ್ಲಾಹನ ಸಂದೇಶವಾಹಕರು(ಸ) ಹೇಳುತ್ತಾರೆ,

« السَّمْعُ وَالطَّاعَةُ فِيمَا أَحَبَّ وَكَرِهَ، إِلَّا أَنْ يُؤْمَرَ بِمَعْصِيَةٍ، فَإِنْ أُمِرَ بِمَعْصِيَةٍ فَلَا سَمْعَ وَلَا طَاعَةَ»

“ಪಾಪ ಕಾರ್ಯದ ಆದೇಶದ ಹೊರತು, ಆಡಳಿತಗಾರನ ಯಾವುದೇ ಆದೇಶವು ತನಗೆ ಇಷ್ಟವಿದ್ದರೂ ಇಲ್ಲದಿದ್ದರೂ ಅದನ್ನು ಅನುಸರಿಸುವುದು ಮುಸ್ಲಿಮನ ಮೇಲೆ ಕಡ್ಡಾಯವಾಗಿದೆ. ಪಾಪ ಕಾರ್ಯದ ಆದೇಶ ನೀಡಿದರೆ, ಅದನ್ನು ಆಲಿಸಲೂ ಬಾರದು ಮತ್ತು ಅನುಸರಿಸಲೂ ಬಾರದು.” (ಬುಖಾರಿ, ಮುಸ್ಲಿಮ್)

5. ಸ್ವಾತಂತ್ರ್ಯ

ಇಸ್ಲಾಮ್ ವ್ಯಕ್ತಿ ಸ್ವಾತಂತ್ರ್ಯಕ್ಕೆ ಬಹಳ ಮಹತ್ವ ಕಲ್ಪಿಸುತ್ತದೆ. ಯಾರನ್ನೂ ಯಾವುದೇ ನಿರ್ದಿಷ್ಟ ತತ್ವವನ್ನು ಅನುಸರಿಸಲು ಅಥವಾ ಯಾವುದೇ ನಿರ್ದಿಷ್ಟ ದೃಷ್ಟಿಕೋನದಂತೆ ಜೀವನ ಸಾಗಿಸಲು ನಿರ್ಬಂಧಿಸುವುದಿಲ್ಲ. ಬದಲಾಗಿ ಇಸ್ಲಾಮೀ ಸಾಮ್ರಾಜ್ಯದಲ್ಲಿ ಪ್ರತಿಯೋರ್ವ ವ್ಯಕ್ತಿಗೂ ಸಂಪೂರ್ಣ ಸ್ವಾತಂತ್ರ್ಯವಿರುವುದು. ವ್ಯಕ್ತಿಗೆ ತನ್ನ ಇಷ್ಟದ ಜೀವನ ವಿಧಾನವನ್ನು ಅನುಸರಿಸುವ, ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಎಲ್ಲ ಸ್ವಾತಂತ್ರ್ಯವೂ ಇದೆ. ಆದರೆ ಅವನ ಈ ಸ್ವಾತಂತ್ರ್ಯದಿಂದ ಇತರರ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟಾಗಬಾರದು ಅಷ್ಟೇ.

ಇಸ್ಲಾಮ್ ತನ್ನ ಸಾಮ್ರಾಜ್ಯದಲ್ಲಿ ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದೆ. ಗ್ರಂಥದವರಿಗೆ ತಮ್ಮ ಧರ್ಮದಂತೆ ಬಾಳುವ ಸ್ವಾತಂತ್ರ್ಯವಿದೆ; ಅವರನ್ನು ಅದರಿಂದ ಯಾರೂ ತಡೆಯಲಾರರು. ಅಲ್ಲಾಹ್ ಹೇಳುತ್ತಾನೆ,

﴿ لَآ إِكْرَاهَ فِى ٱلدِّينِ ۖ ﴿٢٥٦﴾ ﴾ البقرة: ٢٥٦

“ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ–ಬಲಾತ್ಕಾರವಿಲ್ಲ.” (ಪವಿತ್ರ ಕುರ್‌ಆನ್: 2: 256)

ಇನ್ನೊಂದೆಡೆ ಹೇಳುತ್ತಾನೆ,

﴿ أَفَأَنتَ تُكْرِهُ ٱلنَّاسَ حَتَّىٰ يَكُونُوا۟ مُؤْمِنِينَ ﴿٩٩﴾ ﴾ يونس: ٩٩

“ಹೀಗಿರುವಾಗ ಜನರೆಲ್ಲರೂ ಸತ್ಯವಿಶ್ವಾಸಿಗಳಾಗಬೇಕೆಂದು ನೀವು ಒತ್ತಾಯ ಪಡಿಸುವಿರಾ?” (ಪವಿತ್ರ ಕುರ್‌ಆನ್: 10: 99)

ಇತಿಹಾಸದ ಒಂದು ಪ್ರಮುಖ ಘಟನೆಯಿದೆ. ಅಮ್ರ್ ಬಿನ್ ಆಸ್‌ರ(ರ) ಮಗ ಮತ್ತು ಈಜಿಪ್ಟಿನ ಓರ್ವ ಕಿಬ್ತಿಯ ನಡುವೆ ಸ್ಪರ್ಧೆ ಏರ್ಪಟ್ಟಿತು. ಅದರಲ್ಲಿ ಕಿಬ್ತಿಯು ಜಯಿಸಿದನು. ಅದರಿಂದ ಅಮ್ರ್ ಬಿನ್ ಆಸ್‌ರ(ರ) ಮಗ ಕೋಪಗೊಂಡು ಆತನಿಗೆ ಹೊಡೆದನು. ಹೀಗೆ ಪೀಡಿತ ಯುವಕನು ಖಲೀಫ ಉಮರ್‌ರವರ(ರ) ಬಳಿ ದೂರು ನೀಡಿದನು. ಅವರು ಅಮ್ರ್ ಬಿನ್ ಆಸ್(ರ) ಮತ್ತು ಅವರ ಮಗನನ್ನು ಆಸ್ಥಾನಕ್ಕೆ ಕರೆಸಿದರು. ಬಳಿಕ ಅಮ್ರ್ ಬಿನ್ ಆಸ್‌ರ(ರ) ಮುಂದೆಯೇ ಅವರ ಮಗನಿಗೆ ಹೊಡೆದು ತನ್ನ ಪ್ರತೀಕಾರ ತೀರಿಸಲು ಆದೇಶಿಸಿದರು. ಬಳಿಕ ಅಮ್ರ್ ಬಿನ್ ಆಸ್‌ರನ್ನುದ್ದೇಶಿಸಿ ಕೇಳಿದರು, “ನೀವು ಯಾವಾಗಿನಿಂದ ಜನರನ್ನು ಗುಲಾಮರನ್ನಾಗಿಸಿದಿರಿ? ಅವರನ್ನು ಅವರ ತಾಯಂದಿರು ಸ್ವತಂತ್ರರಾಗಿಯೇ ಹಡೆದಿರುವರು.” ಇಸ್ಲಾಮ್ ಇಂತಹ ಇನ್ನೂ ಅನೇಕ ಸ್ವಾತಂತ್ರ್ಯಗಳನ್ನು ನೀಡಿದೆ. ಉದಾಹರಣೆಗೆ: ನಾಗರಿಕ ಸ್ವಾತಂತ್ರ್ಯ. ಅದರಲ್ಲಿ ಮಾನವನು ವಾಗ್ದಾನ ಮಾಡಲು ಮತ್ತು ಹೊಣೆಗಾರಿಕೆಗಳನ್ನು ಸ್ವೀಕರಿಸಲು ಸ್ವತಂತ್ರನಾಗಿದ್ದಾನೆ. ಇಸ್ಲಾಮ್ ಅಪ್ರಬುದ್ಧ ಬಾಲಕ ಮತ್ತು ಹುಚ್ಚನನ್ನು ಹೊರತು ಪಡಿಸಿ ಪ್ರತಿಯೋರ್ವನಿಗೂ ಸ್ವಾತಂತ್ರ್ಯವನ್ನು ನೀಡಿದೆ. ಈ ಸ್ವಾತಂತ್ರ್ಯಗಳಲ್ಲಿ ರಾಜಕೀಯ ಸ್ವಾತಂತ್ರ್ಯ ಮತ್ತು ವೈಚಾರಿಕ ಸ್ವಾತಂತ್ರ್ಯವೂ ಸೇರಿದೆ. ಇಸ್ಲಾಮಿನಲ್ಲಿ ಸ್ವಾತಂತ್ರ್ಯ ಎಂದರೆ, ಇಸ್ಲಾಮಿನ ಮೂಲ ಸಿದ್ಧಾಂತ ಮತ್ತು ನೀತಿಗಳೊಂದಿಗೆ ಸಂಘರ್ಷಿಸಬಾರದು ಹಾಗೂ ಇತರರ ಸ್ವಾತಂತ್ರ್ಯಕ್ಕೆ ಧಕ್ಕೆಯನ್ನುಂಟು ಮಾಡಬಾರದು ಎಂದಾಗಿದೆ.

* * * * *

www.uzairfalahi.com